ಮಾಡಿದ್ದೀನಿ. ಆದರೆ ಇದು ನಾನು ಕುಟುಂಬ ಕಟ್ಟಿಕೊಳ್ಳಲು ಸರಿಯಾದ ಕಾಲ; ಅದು ತಡವಾದರೆ ಸರಿಯಾಗಲ್ಲ ಅನಿಸಿತು.

ಯಾವುದಾದರೂ ಹುಡುಗಿ ನನ್ನನ್ನು ನೋಡಿದರೆ 'ನಾನು ರಾಧಿಕಾ ಪಂಡಿತ್ ಥರ ಆಗಬೇಕು' ಎಂದು ಅವಳಿಗೆ ಅನಿಸಬೇಕು. 'ನಟಿಯಾಗಿ ಒಳ್ಳೆಯ ಕೆಲಸ ಮಾಡಿದ್ದಾಳೆ; ಹಾಗೆಯೇ ವೈಯಕ್ತಿಕ ಜೀವನವನ್ನೂ ಅಷ್ಟೇ ಚೆನ್ನಾಗಿ ರೂಪಿಸಿಕೊಂಡಿದ್ದಾಳೆ' ಎಂದು ಕರೆಸಿಕೊಳ್ಳುವುದಿದೆಯಲ್ಲ, ಅದು ನನಗೆ ತುಂಬ ಮುಖ್ಯ. ಈ ನಿಟ್ಟಿನಲ್ಲಿಯೇ ನಾನು ಜನರಿಗೆ ಸ್ಫೂರ್ತಿಯಾಗಬೇಕು.

ಜೀವನದುದ್ದಕ್ಕೂ ನಾಯಕಿಯಾಗಿ ನಟಿಸಲು, ನಂಬರ್ ಒನ್ ಆಗಿರಲು ಸಾಧ್ಯವಿಲ್ಲ. ನಂಬರ್ ಒನ್ ಎನ್ನುವುದು ಪ್ರತಿ ಶುಕ್ರವಾರ ಬದಲಾಗುತ್ತಿರುತ್ತದೆ. ಒಬ್ಬಳು ನಟಿಯಾಗಿ ಜನರು ನನ್ನನ್ನು ಯಾವಾಗಲೂ ಗುರ್ತಿಸುತ್ತಾರೆ. ಹಾಗೆಯೇ ನನ್ನ ಕುಟುಂಬ ನನ್ನ ಬದುಕು.

◆ **ನಿಮ್ಮ ಮತ್ತು ಯಶ್ ವೈಯಕ್ತಿಕ ಬದುಕಿನ ಕುರಿತು ಪದೇಪದೆ ಮಾಧ್ಯಮಗಳಲ್ಲಿ ಚರ್ಚೆಗಳಾಗಿರುತ್ತವೆ. ಇದನ್ನು ನೀವು ಹೇಗೆ ನೋಡುತ್ತೀರಿ?**

ಖಂಡಿತ ಈ ಚರ್ಚೆಗಳನ್ನು ನಾವು ಸಕಾರಾತ್ಮಕವಾಗಿಯೇ ತೆಗೆದುಕೊಳ್ಳುತ್ತೇವೆ. ನಾವೇ ಆಯ್ಕೆ ಮಾಡಿಕೊಂಡಿರುವ ಕ್ಷೇತ್ರ ಇದು. ಜನ ನಮ್ಮನ್ನು ಪ್ರೀತಿಸಬೇಕು, ನಮ್ಮ ಬಗ್ಗೆ ಮಾತಾಡಿಕೊಳ್ಳಬೇಕು ಎಂದು ಬಯಸುತ್ತಲೇ ಬೆಳೆದವರು ನಾವು. ಜನರು ನಮ್ಮನ್ನು ಪ್ರೀತಿಸುತ್ತಾರೆ. ಇದ್ದರೆ ಈ ಜೋಡಿಗಳ ಹಾಗೆ ಇರಬೇಕು ಎಂದು ಅನ್ನಿಸಿಕೊಳ್ಳುವ ಭಾಗ್ಯ ಎಷ್ಟು ಜನರಿಗೆ ಸಿಗುತ್ತದೆ ಹೇಳಿ? ಆ ವಿಷಯದಲ್ಲಿ ನಾವು ಸಾಕಷ್ಟು ಲಕ್ಕಿ.

ಈ ಅದೃಷ್ಟದ ಜೊತೆಗೇ ನಮ್ಮ ಮೇಲೆ ಜವಾಬ್ದಾರಿಯೂ ಅಷ್ಟೇ ಇದೆ. ನಾವು ಏನೇ ಮಾಡಿದರೂ ಯೋಚನೆ ಮಾಡಿಯೇ ಮಾಡಬೇಕಾಗುತ್ತದೆ. ಯಾಕೆಂದರೆ ಅದು ಚರ್ಚೆಗೆ ಒಳಗಾಗುತ್ತದೆ; ಅದನ್ನು ಅನುಸರಿಸುವ ಜನರು ಇರುತ್ತಾರೆ. ಆ ಎಚ್ಚರದ ಜೊತೆಗೇ ನಾವು ಜನರ ಅಭಿಮಾನ–ಪ್ರೀತಿಯನ್ನು ಎಂಜಾಯ್ ಮಾಡುತ್ತೇವೆ. ■

## ಡಾಲಿಯ ಪದ್ಯ ಖಯಾಲಿ



ಡಾಲಿ ಧನಂಜಯ್ ಬರವಣಿಗೆಯನ್ನೂ ನಟನೆಯನ್ನೂ ಒಟ್ಟೊಟ್ಟಿಗೇ ಆರಂಭಿಸಿದವರು. ತಮ್ಮ ಮೊದಲ ಕಿರುಚಿತ್ರ 'ಜಯನಗರ ಫೋರ್ತ್ ಬ್ಲಾಕ್' ಸಿನಿಮಾದಲ್ಲಿ ಅವರು ನಟಿಸುವುದರ ಜೊತೆಗೆ ಕಥೆಯನ್ನೂ ಬರೆದಿದ್ದರು. ನಂತರ ನಟನೆಯಲ್ಲಿ ಸಾಕಷ್ಟು ಮುಂದುವರಿದರೂ ಬರವಣಿಗೆಯ ಹವ್ಯಾಸ ಅವರೊಳಗೆ ಹಸಿಯಾಗಿಯೇ ಇತ್ತು. ಇತ್ತೀಚೆಗೆ ಬಿಡುಗಡೆಯಾದ 'ಡಾಟರ್ ಆಫ್ ಪಾರ್ವತಮ್ಮ' ಚಿತ್ರಕ್ಕೆ ಧನು ಬರೆದ ಹಾಡು ಜನರ ಮೆಚ್ಚುಗೆಗೂ ಪಾತ್ರವಾಗಿತ್ತು. ಇದೀಗ ಅವರು ಮತ್ತೊಂದು ಸಿನಿಮಾಗೆ ಸಾಹಿತ್ಯ ಬರೆದಿದ್ದಾರೆ. ಈ ಚಿತ್ರದಲ್ಲಿ ಅವರು ನಟಿಸುತ್ತಿದ್ದಾರೆ ಕೂಡ. ಇದು ಹೊಸ ಸಿನಿಮಾ ಏನಲ್ಲ. ಈಗಾಗಲೇ ಸುದ್ದಿ ಮಾಡುತ್ತಲೇ ಇರುವ, ವಿಜಯ ಪ್ರಸಾದ್ ನಿರ್ದೇಶನದ ಜಗ್ಗೇಶ್ ಮತ್ತು ಧನಂಜಯ್ ಮುಖ್ಯಪಾತ್ರದಲ್ಲಿ ನಟಿಸಿರುವ 'ತೋತಾಪುರಿ' ಚಿತ್ರದ ಒಂದು ಹಾಡಿಗೆ ಸಾಹಿತ್ಯ ಬರೆದಿದ್ದಾರಂತೆ.

ನಟನೆಯಲ್ಲಿ ಎಷ್ಟೇ ಬ್ಯುಸಿಯಾದರೂ ಪೆನ್ನು ಪೇಪರ್ ಹಿಡಿದುಕೊಂಡಾಗ ಸಿಗುವ ಖುಷಿಯನ್ನು ಬಿಟ್ಟುಕೊಡಲು ಡಾಲಿ ಸಿದ್ಧರಿಲ್ಲ. ಹಾಗಾಗಿ ಅವಕಾಶ ಸಿಕ್ಕಾಗೆಲ್ಲ ಸಾಹಿತ್ಯ ಕೃಷಿಯನ್ನೂ ಅವರು ಮುಂದುವರಿಸುತ್ತ ಬಂದಿದ್ದಾರೆ. 'ಡಾಟರ್ ಆಫ್ ಪಾರ್ವತಮ್ಮ' ಸಿನಿಮಾದ ಹಾಡಿನ ಹಾಗೆಯೇ ಈ ಹಾಡನ್ನೂ ಜನರು ಮೆಚ್ಚಿಕೊಳ್ಳುತ್ತಾರೆ ಎಂಬ ನಿರೀಕ್ಷೆ ಅವರದು. ನಟನೆ–ಬರವಣಿಗೆ ಎರಡು ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವ ಧನಂಜಯ್ ಅವರಿಗೆ ನಿರ್ದೇಶನ ಮತ್ತು ನಿರ್ಮಾಣದಲ್ಲಿಯೂ ಆಸಕ್ತಿ ಇದೆಯಂತೆ. ಸೂಕ್ತ ಅವಕಾಶಕ್ಕಾಗಿ ಅವರು ಕಾಯುತ್ತಿದ್ದಾರೆ. ■

# ಚಾಲೆಂಜಿಂಗ್ ಸ್ಟಾರ್ ಕೌರವ!



'ಕುರುಕ್ಷೇತ್ರ' ಸಿನಿಮಾ ಆರಂಭದಿಂದಲೂ ಸುದ್ದಿ ಮಾಡುತ್ತಲೇ ಬಂದಿದೆ. 'ಬಾಹುಬಲಿ' ಮಾದರಿಯ ಕನ್ನಡ ಸಿನಿಮಾ ಎಂಬುದು ಈ ಸುದ್ದಿಯ ಒಂದು ತುದಿಯಾದರೆ, ದರ್ಶನ್ ನಟನೆಯ 50ನೇ ಸಿನಿಮಾ ಎನ್ನುವುದು ಇನ್ನೊಂದು ಮೊನೆ. ಹಲವು ಘಟಾನುಘಟಿ ನಟರೆಲ್ಲ ಈ ಚಿತ್ರದಲ್ಲಿ ಪಾತ್ರವಹಿಸಿರುವ ಕಾರಣಕ್ಕೂ ಈ ಚಿತ್ರದ ಕುರಿತು ನಿರೀಕ್ಷೆ ಹೆಚ್ಚಿತ್ತು.

ಆದರೆ ಇತ್ತೀಚೆಗೆ ನಡೆದ ಅದ್ದೂರಿ ಧ್ವನಿಸಾಂದ್ರಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಈ ನಿರೀಕ್ಷೆಯ ಏರುಕುದಿಗೆ ಒಂದಿಷ್ಟು ತಣ್ಣೀರು ಬಿದ್ದಂತಿದೆ. ಹಾಡುಗಳ ಜೊತೆಗೇ ಬಿಡುಗಡೆಯಾದ ಟ್ರೇಲರ್ ನೋಡಿದ ಹಲವರಿಗೆ ಇದು ಕುರುಕ್ಷೇತ್ರದ ಸಾಕ್ಷಾತ್ಕಾರದ ಬದಲಾಗಿ ಗೊಂಬೆ ಕುಣಿತದಂತೆ ಭಾಸವಾಗಿದೆ. ಜೊತೆಗೆ ಈ ಸಿನಿಮಾದ ಕಥೆಯ ಕ್ರೆಡಿಟ್ ನಿರ್ಮಾಪಕ ಮುನಿರತ್ನ ಅವರೇ ತೆಗೆದುಕೊಂಡಿರುವುದೂ ಸೋಷಿಯಲ್ ಮೀಡಿಯಾದಲ್ಲಿ ಸಾಕಷ್ಟು ಟ್ರೋಲ್ ಆಗುತ್ತಿದೆ. ವ್ಯಾಸರು ಬರೆದ ಪಾತ್ರಗಳನ್ನು ಇಟ್ಟುಕೊಂಡು ಮುನಿರತ್ನ ಹೊಸ ಕಥೆಯನ್ನೇನಾದರೂ ಬರೆದಿದ್ದಾರಾ ಎಂಬುದು ಪ್ರಶ್ನೆ. ಇದಕ್ಕೆ ಪುಷ್ಟಿಯೊದಗಿಸುವಂತೆ ಟ್ರೇಲರ್‌ನಲ್ಲಿ 'ವ್ಯಾಸ ರಚಿತ ಮಹಾಪಾತ್ರಗಳು, ಕೌರವ ಪಾಂಡವರು' ಎಂಬ ಸಾಲುಗಳು ಇವೆ. ಹಾಗಾದರೆ ಮುನಿರತ್ನ ರಚಿತ ಕಥೆಯಲ್ಲಿ ಚಾಲೆಂಜಿಂಗ್ ಸ್ಟಾರ್ ನಟಿಸಿರುವ ದುರ್ಯೋಧನನೇ ನಾಯಕ ಇರಬಹುದಾ? ಹೌದು ಎನ್ನುವ ಹಾಗೆ ಟ್ರೇಲರ್‌ನಲ್ಲಿ ಕೌರವನ ವೈಭೋಗವೇ ಇಡಿಕಿರಿದಿದೆ. ಯುದ್ಧದ ದೃಶ್ಯದ ಗ್ರಾಫಿಕ್‌ಗಳು ಎರಡು ನಿಮಿಷದ ಟ್ರೇಲರ್‌ನಲ್ಲಿಯೇ ನಗುವುಕ್ಕಿಸುತ್ತವೆ. ಇನ್ನು ಮೂರು ಗಂಟೆಗಳ ಸಿನಿಮಾದಲ್ಲಿ ಹೇಗೆಲ್ಲ ಇರಬಹುದು? ಈ ಕುತೂಹಲಕ್ಕೆ ಆಗಸ್ಟ್‌ನಲ್ಲಿ ಬಿಡುಗಡೆಯಾಗಲಿರುವ ಚಿತ್ರವನ್ನು ನೋಡುವ ರಿಸ್ಕ್ ತೆಗೆದುಕೊಳ್ಳದೇ ಬೇರೆ ವಿಧಿಯಿಲ್ಲ. ■